# ಏನು ಮರುಳಾದೆಯೆ ಎಲೆ ಭಾರತಿ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 19.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 139.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 137.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are same as in Ref. 1 with few minor differences which are not considered here.

ರಾಗ: ಕಾಂಬೋದಿ ತಾಳ: ಝಂಪೆ

ಏನು ಮರುಳಾದೆಯೆ ಎಲೆ ಭಾರತಿ
ವಾನರನಿಕರದೊಳು ಶ್ರೇಷ್ಠನಾದವಗೆ || ಪ ||

ಕಣ್ಣಿಲ್ಲದವಳ ಗರ್ಭದಲಿ ಜನಿಸಿಬಂದು
ನಿನ್ನ ತೊರೆದು ಬ್ರಹ್ಮಚಾರಿಯಾದ
ಹೆಣ್ಣಿಗಾಗಿ ಪೋಗಿ ವನವ ಕಿತ್ತೀಡಾಡಿ
ಉಣ್ಣ ಕರೆದರೆ ಎಂಜಲೆಡೆಯನೊಯ್ದವಗೆ || ೧ ||

ಹುಟ್ಟಿದನು ಗುರುತಲ್ಪ ಗಾಮಿಯಾ ವಂಶದಲಿ
ನಟ್ಟಿರುಳೊಳೊಬ್ಬ ಅಸುರಿಯ ಕೂಡಿದ
ಹೊಟ್ಟೆಗೆಂತಲೆ ಹೋಗಿ ಭಿಕ್ಷದನ್ನವನುಂಡು
ಅಟ್ಟು ಹಾಕುವನಾಗಿ ದಿನವ ಕಳೆದವಗೆ || ೨ ||

ಮಂಡೆ ಬೋಳಾಗಿ ಭೂಮಂಡಲವ ತಿರುಗಿದ
ಕಂಡವರು ಯಾರು ಈತನ ಗುಣಗಳ
ಪುಂಡರೀಕಾಕ್ಷ ಶ್ರೀ ಪುರಂದರ ವಿಠಲನ
ಕೊಂಡಾಡುತಲಿ ಬೋರೆಮರದ ಕೆಳಗಿದ್ದವಗೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ದಿಟವಾಗಿ ಇದು ವಾಯುದೇವರ ಅವತಾರತ್ರಯದ ವರ್ಣನೆ. ಆದರೆ ಭಾರತೀ ದೇವಿಯನ್ನು ಉದ್ದೇಶಿಸಿ ಹಾಡಿರುವುದರಿಂದ ಇಲ್ಲಿ ಸೇರಿಸಿದೆ.

**ಭಾರತಿ ದೇವಿ :** - ವಾಯುದೇವರ ಪತ್ನಿ (ಕಕ್ಷಾ ೪)

**ವಾನರ ಕುಲದೊಳಗೆ ಶ್ರೇಷ್ಠ: -** ಹನುಮಂತ (ಕಪಿ ನಾಯಕನಾದ ಕೇಸರಿಯ ಮಗ. ವಾಯುದೇವರ ಒಂದನೆಯ ಅವತಾರ)

**ಕಣ್ಣಿಲ್ಲದವಳು : -** ಅಂಜನಾದೇವಿ. ಇವಳು ತನ್ನ ತಾಯಿ ಅಹಲ್ಯೆಯ ಶಾಪದಿಂದ ಕುರುಡಳಾದಳು. (ಆಂಧ್ರ ಭಾಷೆಯ ವಚನ ವಿಚಿತ್ರರಾಮಾಯಣ). ಇವಳ ತಂದೆಯ ಹೆಸರು ಕುಂಜರ. ಇವಳು ಒಬ್ಬ ಅಪ್ಸರೆ. ಶಾಪದಿಂದ ಅಂಜನೆಯಾಗಿ ಹುಟ್ಟಿ ಕೇಸರಿಕಪಿಯನ್ನು ಮದುವೆಯಾದಳು. (ಶಿವ.ಶತ ಸಂಹಿತಾ ೨೦; ಭವಿಷ್ಯ. ಪ್ರತಿಸರ್ಗ ೪-೧೩)

**ಕಣ್ಣಿಲ್ಲದವಳ ಗರ್ಭದಲಿ ಜನಿಸಿ –** ಅಂಜನೆಯ ಬಸಿರಲ್ಲಿ. ಅಹಲ್ಯೆ ಮತ್ತು ಗೌತಮರ ಮಗಳಾದ ಅಂಜನೆಯು ತಾಯ ಶಾಪದಿಂದ ಕುರುಡಿಯಾದ ಕತ ಇದರ ಹಿನ್ನೆಲೆ. ಅಹಲ್ಯೆಯು ಗುಟ್ಟಾಗಿ ಇಂದ್ರನಿಂದ ಒಬ್ಬ ಮಗನನ್ನೂ ಸೂರ್ಯನಿಂದ ಮತ್ತೊಬ್ಬ ಮಗನನ್ನೂ ಪಡೆದುಕೊಂಡಳೆಂದೂ, ಈ ಗುಟ್ಟನ್ನು ತಿಳಿದಿದ್ದ ಮಗಳು ಗೌತಮರಿಗೆ ಅದನ್ನು ಬಯಲುಮಾಡಿದಳೆಂದೂ ತಾಯಿ ಸಿಟ್ಟಿಗೆದ್ದು ಮಗಳಿಗೆ ಶಾಪ ಕೊಟ್ಟಳೆಂದೂ ತೆಲುಗಿನಲ್ಲಿರುವ 'ವಚನವಿಚಿತ್ರ ರಾಮಾಯಣಮು' ಎಂಬ ಗ್ರಂಥದಲ್ಲಿದೆ.

**ನಿನ್ನ ತೊರೆದು –** ತ್ರೇತಾಯುಗದ ಹನುಮಂತನ ಅವತಾರದಲ್ಲಿ ಅವನು ನೈಷ್ಠಿಕ ಬ್ರಹ್ಮಚಾರಿ.

**ನಿನ್ನ ತೊರೆದು ಬ್ರಹ್ಮಚಾರಿಯಾದ : -** ತ್ರೇತಾಯುಗದಲ್ಲಿ ಭಾರತಿದೇವಿ ತನ್ನ ಮೊದಲನೆಯ ಜನ್ಮದಲ್ಲಿ ಶಿವ ಬ್ರಾಹ್ಮಣನ ಕನ್ಯೆಯಾಗಿ ಹುಟ್ಟಿ ಅಲ್ಪಾಯುವಾಗಿ ತೀರಿದಳು. ಎರಡನೆಯ ಜನ್ಮದಲ್ಲಿ ನಳ-ದಮಯಂತಿಯರ ಮಗಳಾದ ಇಂದ್ರಸೇನೆಯಾಗಿ ಹುಟ್ಟಿ ಮೌದ್ಗಲ್ಯನೆಂಬ ಋಷಿಯ ಶಾಪದಿಂದ (ಶಚಿ, ಶ್ಯಾಮಲಾ, ಪಾರ್ವತೀ, ಉಷಾ ಎಂಬ ಅಂಶಗಳಿಂದ ಕೂಡಿ) ದ್ರೌಪದಿಯಾಗಿ ಯಜ್ಞಕುಂಡಲದಲ್ಲಿ ಹುಟ್ಟಿದಳು. ತ್ರೇತಾಯುಗದಲ್ಲಿ ಹನುಮಂತ ದೇವರಿಗೆ ಭಾರತೀಯ ಸಂಬಂಧ ಬರಲಿಲ್ಲ. (ಭಾರತ ಆದಿ. ೨೧೨)

**ಹೆಣ್ಣಿಗಾಗಿ ಪೋಗಿ... –** ಸೀತೆಯನ್ನು ಅರಸುತ್ತ ಲಂಕೆಗೆ ಹೋಗಿ, ಅಶೋಕವನವನ್ನು ನಾಶಮಾಡಿದನು.

**ಉಣ್ಣ ಕರೆದರೆ…** – ರಾಮನು ಲಂಕೆಯಿಂದ ಹಿಂದಿರುಗಿದ ಮೇಲೆ ಅಯೋಧ್ಯೆಯಲ್ಲಿ ನಡೆದ ಭೋಜನಕೂಟದಲ್ಲಿ ರಾಮನು ಹನುಮಂತನನ್ನು ತನ್ನ ಜೊತೆ ಕುಳಿತು ಊಟಮಾಡೆಂದು ಕರೆದಾಗ, ಸೇವಕನಾದ ತಾನು ಅವನಿಂದ ದೊರೆತ ಭಕ್ಷ್ಯವನ್ನು ಪ್ರಸಾದವೆಂದು ಪಡೆದುಹೋದ.

**ಹುಟ್ಟಿದನು…** – ಚಂದ್ರನು ತನ್ನ ಗುರುಪತ್ನಿಯಾದ ತಾರೆಯನ್ನು ಕೂಡಿಕೊಂಡನಾಗಿ ಅವನು ಗುರುತಲ್ಪಗಾಮಿ, ಅವನ ವಂಶ ಚಂದ್ರ ವಂಶ.

**ಅಸುರೆ** = ಹಿಡಿಂಬೆ

**ನಟ್ಟಿರುಳೊಳೊಬ್ಬ…** – ಭೀಮನು ರಾತ್ರಿಯಲ್ಲಿ ಅರಣ್ಯದಲ್ಲಿ ಹಿಡಿಂಬೆಯೆಂಬ ರಾಕ್ಷಸಿಯೊಂದಿಗೆ ಕೂಡಿಕೊಂಡದ್ದು ಮಹಾಭಾರತದ ಆದಿಪರ್ವದಲ್ಲಿ ಬರುತ್ತದೆ.

**ಹೊಟ್ಟೆಗಂತಲೆ…** – ಏಕಚಕ್ರ ನಗರಿಯಲ್ಲಿ ಭಿಕ್ಷೆ ಬೇಡಿ ಅನ್ನವನ್ನು ತರುತ್ತಿದ್ದವನು ಐವರು ಪಾಂಡವರಲ್ಲಿ ಭೀಮನೊಬ್ಬನೇ. ಇದನ್ನೂ ಅವನ ಅಗತ್ಯವನ್ನೂ ಗಮನಿಸಿ ತಾಯಿಯಾದ ಕುಂತಿ ಅವನು ತಂದ ಭಿಕ್ಷಾನ್ನದಲ್ಲಿ ಅರ್ಧ ಭಾಗವನ್ನು ಅವನಿಗೇ ಕೊಡುತ್ತಿದ್ದಳು.

**ಅಟ್ಟು ಹಾಕುವನಾಗಿ** – ವಲಲನಾಗಿ, ವಿರಾಟನಗರದಲ್ಲಿ ಪಾಂಡವರು ಅಜ್ಞಾತವಾಸ ಮಾಡುತ್ತಿರುವಾಗ ಭೀಮನು ಅರಮನೆಯ ಅಡುಗೆಯವನಾಗಿದ್ದ ಸಂದರ್ಭ.

**ಮಂಡೆ ಬೋಳಾಗಿ** – ಸಂನ್ಯಾಸಿಯಾಗಿ.  ಮಧ್ವಾವತಾರ.

**ಬೋರೆ ಮರದ ಕೆಳಗಿದ್ದವಗೆ** – ಬೋರೆ ಮರವೆಂದರೆ ಬದರಿ; ಹಿರಿಯ ಬದರಿಯಲ್ಲಿ ವೇದವ್ಯಾಸರು ಆಶ್ರಮದ ಬೋರೆಮರದಡಿಯಲ್ಲಿ ಕುಳಿತಿದ್ದಾರೆಂದೂ, ಮಧ್ವಾಚಾರ್ಯರು ಅವರನ್ನು ಅಲ್ಲಿಯೇ ಕಂಡು, ಅವರ ಬಳಿ ಉಳಿದಿದ್ದರೆಂದೂ ಸಂದರ್ಭ.  ಹೀಗೆಂದು ಸುಮಧ್ವ ವಿಜಯದಲ್ಲಿ ಬಂದಿದೆ.

**Classification:** Keerthane
**Ankita:** sri purandara vittala
**Location:** NA
**Category:** Hanuma Stuti
**Sub-Category:** hanuma, hanuma-bhima-madhva, bhima, madhva, Bharati, kannu, huttu, oota, enjalu, asura, bhikshe, dina, bhumi, loka, mara,

**Pravachana:** NA

**Explanation:** NA